ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟ್‌ಸನ್ಸ್ ರಸ್ತೆ, ಫ್ರೇಜರ್ ಟೌನ್

ಸ.ಕಾ.ಅ/ಪುನ/ಪಿಆರ್/ 09/2022-23 ದಿನಾಂಕ: 19-09-2022

ವಿಷಯ:- 19-09-2022 ರಂದು ವಾರ್ಡ್ ನಂ.78 ರ ವಾರ್ಡ್ ಸಮಿತಿ ಹಾಗೂ ವಾರ್ಡ್ ವಿಪತ್ತು ನಿರ್ವಹಣಾ ಸಮಿತಿಯ ಸಭೆಯ ನಡುವಳಿಗಳು-

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಜಿ.ತಿಪ್ಪೇಸ್ವಾಮಿ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ಅಹಮದ್ ಸೇಟ್ ರಸ್ತೆ, ಸ್ಟೀಫನ್ಸ್ ರಸ್ತೆ, ರಾಬರ್ಟ್‌ಸನ್ ರಸ್ತೆ, ರತನ್‌ಸಿಂಗ್ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಸೂಚಿಸಲಾಯಿತು.
2. ಬುದ್ಧವಿಹಾರ ರಸ್ತೆ, ನೇತಾಜಿ ರಸ್ತೆ, ವಿಲರ್ಸ್ ರಸ್ತೆ, ಸಿಂಧಿ ಕಾಲೋನಿಯಲ್ಲಿ ಮುಖ್ಯರಸ್ತೆಗಳಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಸಂಬಂಧಪಟ್ಟ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗರವರಿಗೆ ತಿಳಿಸಲಾಯಿತು.
3. ಅಹಮದ್ ಸೇಟ್ ರಸ್ತೆ, ಸಿಂಧಿ ಕಾಲೋನಿ 2ನೇ ಅಡ್ಡರಸ್ತೆ, ರಾಬರ್ಟ್ ಸನ್ ರಸ್ತೆ, ಮೋರ್ ರಸ್ತೆ, ಸೌಂಡರ್ಸ್ ರಸ್ತೆಗಳ ಚರಂಡಿಗಳಲ್ಲಿ ಹೂಳು ತೆಗೆಯಲು ಸೂಚಿಸಲಾಯಿತು.
4. ವಿಲ್ಲರ್ಸ್ ರಸ್ತೆಯಲ್ಲಿರುವ ಚರಂಡಿಗಳಲ್ಲಿ ಹೂಳು ತೆಗೆಯಲು ಸಂಬಂಧಪಟ್ಟ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗರವರಿಗೆ ತಿಳಿಸಲಾಯಿತು.
5. ಮಾಸ್ಕ್ ರಸ್ತೆ, ಬೋರ್ಡಿಲೇನ್ ರಸ್ತೆ, ಬುದ್ಧ ವಿಹಾರ ರಸ್ತೆ, ಸೌಂಡರ್ಸ್ ರಸ್ತೆಗಳಲ್ಲಿರುವ ಪಾದಚಾರಿ ಮಾರ್ಗಗಳು ಹಾಳಾಗಿದ್ದು, ಕೂಡಲೇ ಸದರಿ ಪಾದಚಾರಿ ಮಾರ್ಗಗಳನ್ನು ದುರಸ್ಥಿಗೊಳಿಸಲು ಸೂಚಿಸಲಾಯಿತು.
6. ವಾರ್ಡಿನ ಫ್ರೇಜರ್ ಟೌನ್ ರೆಸಿಡೆಟ್ಸ್ ವೆಲ್‌ಫೇರ್ ಅಸೋಷಿಯನ್ಸ್ ರವರು ಮನವಿ ಪತ್ರ ನೀಡಿ ವಾರ್ಡಿನ ಕೆಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯಲ್ಲಿ ತಿಳಿಸಿರುತ್ತಾರೆ.

ನಂತರ ಮುಂದಿನ ಸಭೆಯೊಳಗೆ ವಾರ್ಡ್ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲು ಸೂಚಿಸುತ್ತಾ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು ಕಾರ್ಯದರ್ಶಿ

**ಪ್ರತಿಯನ್ನು:**

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.

Scanned with CamScanner